# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 423
2. ಸದಸ್ಯರ ಹೆಸರು : ಶ್ರೀ ಚಿದಾನಂದ ಎಂ ಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 15.09.2022
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿರುವ ವಾಣಿ ವಿಲಾಸ ಸಾಗರ ಡ್ಯಾಂ ಯಾವಾಗ ನಿರ್ಮಾಣವಾಯಿತು. | ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿರುವ ವಾಣಿ ವಿಲಾಸ ಸಾಗರ ಡ್ಯಾಂನ್ನು 1898ನೇ ಇಸವಿಯಲ್ಲಿ ನಿರ್ಮಿಸಲು ಪ್ರಾರಂಭಿಸಿ 1907ನೇ ಇಸವಿಯಲ್ಲಿ ಪೂರ್ಣಗೊಳಿಸಲಾಗಿರುತ್ತದೆ. |
| ಆ) | ವಾಣಿ ವಿಲಾಸ ಸಾಗರ ಡ್ಯಾಂನಿಂದ ಎಷ್ಟು ಹೆಕ್ಟೇರ್ ಪ್ರದೇಶಕ್ಕೆ ನೀರಿನ ಸೌಲಭ್ಯ ನೀಡಲಾಗುತ್ತಿದೆ; | ವಾಣಿ ವಿಲಾಸ ಸಾಗರ ಡ್ಯಾಂನಿಂದ 12135 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ. |
| ಇ) | ವಾಣಿ ವಿಲಾಸ ಸಾಗರ ಡ್ಯಾಂನ ವಿಸ್ತೀರ್ಣ ಎಷ್ಟು; | ವಾಣಿ ವಿಲಾಸ ಸಾಗರ ಜಲಾಶಯದ ಜಲಾನಯನ ಪ್ರದೇಶವು (Catchment area) 5374 Sq km ಗಳಾಗಿದ್ದು, ಜಲಾವೃತ ಪ್ರದೇಶ (Water Spread area {at 130 feet FRL})8763 ಹೆಕ್ಟೇರ್‌ಗಳಾಗಿರುತ್ತದೆ. |
| ಈ) | ವಾಣಿ ವಿಲಾಸ ಸಾಗರ ಡ್ಯಾಂನಿಂದ ನೀರಿನ ಸೌಲಭ್ಯವನ್ನು ಚಿತ್ರದುರ್ಗ ಹೊರತುಪಡಿಸಿ ಬೇರೆ ಯಾವ ಜಿಲ್ಲೆಗಳಿಗೆ ನೀಡಲಾಗುತ್ತಿದೆ; | ವಾಣಿ ವಿಲಾಸ ಸಾಗರ ಡ್ಯಾಂನಿಂದ ಚಿತ್ರದುರ್ಗ ಜಿಲ್ಲೆಗೆ ಮಾತ್ರ ನೀರಿನ ಸೌಲಭ್ಯ ನೀಡಲಾಗುತ್ತಿದೆ. |
| ಉ) | ವಾಣಿ ವಿಲಾಸ ಸಾಗರ ಡ್ಯಾಂ ನ ನಾಲೆಗಳು ಸುಸ್ಥಿತಿಯಲ್ಲಿವೆಯೆ; | ವಾಣಿ ವಿಲಾಸ ಸಾಗರ ಡ್ಯಾಂನ ಕಾಲುವೆಗಳನ್ನು ನಿರ್ಮಾಣ ಮಾಡಿ ಸುಮಾರು 115 ವರ್ಷಗಳು ಕಳೆದಿದ್ದು, ಸದರಿ ನಾಲೆಗಳು Unlined ಕಾಲುವೆಗಳಾಗಿರುತ್ತವೆ. ಅಂದಿನ ಅವಧಿಯಲ್ಲಿ ನಿರ್ಮಾಣ ಮಾಡಿರುವ ನಾಲೆಗಳು ಮತ್ತು ನಾಲೆಗಳಿಗೆ ಸಂಬಂಧಿಸಿದ Structures ಗಳು ಶಿಥಿಲಗೊಂಡಿರುತ್ತವೆ. ವಾಣಿ ವಿಲಾಸ ಸಾಗರ ನಾಲೆಗಳು ಮತ್ತು ನಾಲೆಗಳಿಗೆ ಸಂಬಂಧಿಸಿದ Structures ಗಳ ಆಧುನೀಕರಣ ಕಾಮಗಾರಿಗಳಿಗೆ ಒಟ್ಟು ರೂ.261.70 ಕೋಟಿ ಹಾಗೂ ಅಚ್ಚುಕಟ್ಟು ಪ್ರದೇಶದ ಹನಿ ನೀರಾವರಿ ಅಳವಡಿಸುವ ಕಾಮಗಾರಿಗಳಿಗೆ ರೂ.470.90 ಕೋಟಿ, ಒಟ್ಟಾರೆ ರೂ.732.60 ಕೋಟಿಗಳ ಪ್ರಸ್ತಾವನೆಯನ್ನು SIMP(Support for Irrigation Modernisation Program) ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಸ್ತಾವನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. |
| ಊ) | ವಾಣಿ ವಿಲಾಸ ಸಾಗರ ಡ್ಯಾಂ ನ ನಾಲೆಗಳನ್ನು ದುರಸ್ಥಿಪಡಿಸಿ ನೀರಿನ ಸೌಲಭ್ಯ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ? | |

**ಸಂಖ್ಯೆ: ಜಸಂಇ 73 ಡಬ್ಲ್ಯೂಎಲ್ಎ 2022**

**(ಗೋವಿಂದ ಎಂ ಕಾರಜೋಳ)**
**ಜಲಸಂಪನ್ಮೂಲ ಸಚಿವರು**